# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-3874/2015/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 27/2/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ.ಎಂ.ಮಹೇಶ್, ರಾಜ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಇವರು ಸಲ್ಲಿಸಿರುವ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ವರದಿಯನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

******

1. ಶ್ರೀ.ಎಂ.ಮಹೇಶ್, ರಾಜ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ಅಂಬೇಡ್ಕರ್ ಬಡಾವಣೆ, ಅಜ್ಜಂಪುರ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ.ಎಲ್ ರಂಗಪ್ಪ, ಹಿಂದಿನ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆ ಹಾಗೂ ಇತರ 9 (ಒಂಬತ್ತು) ಅಧಿಕಾರಿ/ನೌಕರರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಶಾಲೆಗಳ ಸ್ಥಳಾಂತರದ ವಿಚಾರವಾಗಿ ಕೆಲವು ಶಿಕ್ಷಣ ಸಂಸ್ಥೆಗಳು 12 ವರ್ಷದಿಂದ ಕಾರ್ಯ ನಿರ್ವಹಿಸುತ್ತಿದೆಯೆಂದು ದಾಖಲೆ ಸೃಷ್ಟಿಸಿ ಸರ್ಕಾರದ ಅನುದಾನಕ್ಕೆ ಒಳಪಡಿಸಲು ಮತ್ತು ಸುಳ್ಳು ದಾಖಲೆ ಸೃಷ್ಟಿಸಿ ಸ್ಥಳಾಂತರದ ಪ್ರಸ್ತಾವನೆಯನ್ನು ಎದುರುದಾರರು ಮಾಡಿರುತ್ತಾರೆ. ದಿ.2/9/2010 ರಂದು 4 ಜಿಲ್ಲೆಗಳಿಂದ ಶಾಲೆಗಳನ್ನು ಬೇರೆ ಜಿಲ್ಲೆಗಳಿಗೆ ವರ್ಗಾವಣೆಗೆ ಸುಳ್ಳು ಆದೇಶಗಳನ್ನು ಪಡೆದು ಮತ್ತು ಅಧಿಕಾರಿಗಳು ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳ ವರ್ಗಾವಣೆ ಮತ್ತು ಸ್ಥಾಪನೆ ಮಾಡಲು ಅಧಿಕಾರಿಗಳು ಸುಳ್ಳು ದಾಖಲೆಗಳನ್ನು ಕೊಟ್ಟು ಶಾಲೆಗಳು ಇಲ್ಲದಿದ್ದರೂ ಸಹ ನಕಲಿ ದಾಖಲೆ ಸೃಷ್ಟಿಸಿಕೊಟ್ಟು ಶಾಲೆಗಳನ್ನು ಸ್ಥಾಪಿಸಲು 12 ವರ್ಷಗಳ ಕಾಲ ಶಾಲೆ ನಡೆದಿದೆಯೆಂಬ ದಾಖಲೆಯೊಂದಿಗೆ ವರ್ಗಾವಣೆ ಮಾಡಿಕೊಂಡು ಸರ್ಕಾರದಿಂದ ಅನುಮತಿ ಪಡೆದು ಅನುದಾನ ಪಡೆಯಲು ಸಹಕಾರವಾಗುವಂತೆ 2009-10 ನೇ ಸಾಲಿನಲ್ಲಿ ಅಧಿಕಾರಿಗಳು ಹಾಗೂ ಶಿಕ್ಷಣ ಸಂಸ್ಥೆಯವರು ಶಾಮೀಲಾಗಿ ಸರ್ಕಾರಕ್ಕೆ ವಂಚಿಸಿ ಮೋಸ ಮಾಡಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ದೂರುದಾರರು ನೀಡಿರುವ ದೂರಿನಲ್ಲಿ (1) ಬಸವೇಶ್ವರ ಪ್ರೌಢ ಶಾಲೆ, ಕೆಂಚಾಪುರ ಗೇಟ್, ತರೀಕೆರೆ, (2) ವಿಜಯೇಂದ್ರ ಪ್ರೌಢಶಾಲೆ, ಮದುರಹಳ್ಳಿ, ಅರಕಲಗೂಡು, ಹಾಸನ, (3) ಶ್ರೀನರಸಿಂಹಸ್ವಾಮಿ ಪ್ರೌಢಶಾಲೆ, ಯಗಟಿ, ಕಡೂರು, (4) ರಾಮೇಶ್ವರ ಪ್ರೌಢಶಾಲೆ, ದುಗ್ಲಾಪುರ, ತರೀಕೆರೆ, (5) ಚೌಡೇಶ್ವರಿ ಪ್ರೌಢಶಾಲೆ, ಗೋಪಾಲ ಭೂಸೇನಹಳ್ಳಿ,

ತರೀಕೆರೆ, (6) ಶೃತಿ ಪ್ರೌಢಶಾಲೆ, ಭೂತನಹಳ್ಳಿ, ತರೀಕೆರೆ, (7) ಕುವೆಂಪು ಪ್ರೌಢಶಾಲೆ. ಗೆಂಡೇಹಳ್ಳಿ,ಬೇಲೂರು, (8) ಶಶೀಂದ್ರ ವಸತಿ ಪ್ರೌಢಶಾಲೆ, ಕೆರೆಹಳ್ಳಿ, ಸೋಮವಾರಪೇಟೆ,ಕೊಡಗು. ಇದಕ್ಕೆ ಸಂಬಂಧಿಸಿದಂತೆ ಪ್ರಪತ್ರ ಸಂ.1 (ಫಿರ್ಯಾದು) ಪುಟ 2 ಕಾಲಂ 5 ರಲ್ಲಿ ಹೆಸರಿಸಿರುವ 10 ಅಧಿಕಾರಿ ನೌಕರರಲ್ಲಿ ಕ್ರ.ಸಂ.4 ಕೊಡ್ಲಿ ರವರನ್ನು ಹೊರತುಪಡಿಸಿ ಉಳಿದ ಎಲ್ಲಾ ಅಧಿಕಾರಿ ನೌಕರರ ವಿರುದ್ಧ ಸರ್ಕಾರ ಶಿಸ್ತು ಕ್ರಮ ಜರುಗಿಸಲು ಮಾನ್ಯ ಶ್ರೀ.ಕುಕ್ಕಜೆ ರಾಮಕೃಷ್ಣಭಟ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರನ್ನು ಪ್ರಕರಣದ ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಕೂಲಂಕುಷವಾದ ವಿಚಾರಣೆಯನ್ನು ನಡೆಸಿ, ನೀಡಲ್ಪಟ್ಟ ವಿಚಾರಣಾ ವರದಿಯನ್ನು ಆಧರಿಸಿ ಎಲ್ಲಾ ಆರೋಪಿತರನ್ನು ದೋಷಮುಕ್ತಿಗೊಳಿಸಿ ಶಿಸ್ತು ಪ್ರಾಧಿಕಾರ ಆದೇಶ ಮಾಡಿರುತ್ತದೆ. ಶಾಲೆಗಳ ಹಸ್ತಾಂತರ ಮತ್ತು ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಉಪ ನಿರ್ದೇಶಕರಾದ ಶ್ರೀಮತಿ.ಪದ್ಮಮ್ಮ ಮತ್ತು ಮಂಟೆ ಲಿಂಗಾಚಾರ್‌ರವರು ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸಿದ್ದು, ಆ ಅವಧಿಯಲ್ಲಿ ಈ ಎದುರುದಾರರು ಉಪ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ. ದಿ.18/6/12 ರಲ್ಲಿ ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ನೀಡಿರುವ ಮಾಹಿತಿಯಂತೆ ಅವರ ಅಧಿಕಾರಾವಧಿಯಲ್ಲಿ ಯಾವುದೇ ಶಾಲೆ ಸ್ಥಳಾಂತರ/ಹಸ್ತಾಂತರ ಮಾಡಿರುವುದಿಲ್ಲ, ಸ್ಥಳಾಂತರಕ್ಕೆ ಶಿಫಾರಸ್ಸು ಮಾಡಿ ಯಾವುದೇ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. ಸರ್ಕಾರದ ಆದೇಶ ಸಂಖ್ಯೆ:ಇಡಿ 17 ಡಿಜಿಪಿ 2011 ಬೆಂಗಳೂರು ದಿ.3/3/2011 ರ ಕರ್ನಾಟಕ ಸರ್ಕಾರದ ನಡವಳಿಯಂತೆ ಅವರನ್ನು ಅಮಾನತ್ತುಗೊಳಿಸಿರುವುದಿಲ್ಲ. ಶ್ರೀ.ಮಹೇಶ್‌ರವರು ಮಾಹಿತಿ ಹಕ್ಕು ಅಧಿನಿಯಮದಡಿ ಕೋರಿರುವ ಮಾಹಿತಿಯಂತೆ ದಿ.23/5/11 ರ ಆದೇಶದಲ್ಲಿಯೇ ಹೇಳಿರುವಂತೆ ಘನ ಕೆ.ಎ.ಟಿ.ಯಿಂದ ಅಮಾನತ್ತಿಗೆ ತಡೆಯಾಜ್ಞೆ ತಂದು ಅವರು ಕರ್ತವ್ಯದಲ್ಲಿ ಮುಂದುವರೆದಿರುತ್ತಾರೆಂದು ಹೇಳಿರುತ್ತಾರೆ.

4. 2, 3, 5, 6, 7, 8 ಮತ್ತು 9ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ದೂರಿನಲ್ಲಿ ಮಾಡಿರುವ ಆರೋಪ ನಿರಾಧಾರವಾಗಿದ್ದು, ಸದರಿ ಪ್ರಕರಣಗಳಲ್ಲಿ ಮಾಡಿದ್ದ ಆರೋಪಗಳ ಬಗ್ಗೆ ಕಾರಣ ಕೇಳಿ ನೋಟೀಸು ನೀಡಲಾಗಿತ್ತು. ಅದಕ್ಕೆ ಆರೋಪವನ್ನು ಅಲ್ಲಗಳೆದು ದಾಖಲಾತಿಗಳ ಸಮೇತ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿದ್ದರು. ಆದಾಗ್ಯೂ ಆರೋಪ ಕೈಬಿಡದೆ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ಸರ್ಕಾರ ಕ್ರಮ ಕೈಗೊಂಡಿರುತ್ತದೆ. ಶಾಲೆಗಳನ್ನು ಸ್ಥಳಾಂತರಕ್ಕೆ ಅನುಮತಿ ನೀಡುವ ಅಧಿಕಾರ ಮಾನ್ಯ ಆಯುಕ್ತರಿಗೆ ದತ್ತವಾಗಿದ್ದು, ಅದರಂತೆ ಅನುಮತಿಯನ್ನು ಸಹ ನೀಡಿರುತ್ತಾರೆ. ಸದರಿ ದೂರು ಪ್ರಕರಣದ ಸಂಬಂಧವಾಗಿ ಸರ್ಕಾರವು ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಿದ್ದು, ಸದರಿ ವಿಚಾರಣಾ ವರದಿಯನ್ನು ಒಪ್ಪಿ ಶಿಸ್ತು ಪ್ರಾಧಿಕಾರವು ಅವರನ್ನು ದೋಷಮುಕ್ತರನ್ನಾಗಿ ಮಾಡಿ ಅಂತಿಮ ಆದೇಶವನ್ನು ಹೊರಡಿಸಿರುತ್ತಾರೆಂದು ಹೇಳಿರುತ್ತಾರೆ.

5. 4ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ದೂರುದಾರರು ಸಲ್ಲಿಸಿರುವ ದೂರಿನ ಪ್ರಕಾರ ಹಾವೇರಿ ಜಿಲ್ಲೆಯ ಕಾರ್ಯವ್ಯಾಪ್ತಿಯಲ್ಲಿ ಬರುವ ನಿರ್ದಿಷ್ಟ ಶಾಲೆಯ ಹೆಸರು ಮತ್ತು ವಿವರಗಳನ್ನು ಸಲ್ಲಿಸದೆ ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ. ದೂರುದಾರರು ಹೊರಿಸಿರುವ ಅಪಾದನೆಗಳು ಸತ್ಯಕ್ಕೆ ದೂರವಾದದ್ದು ಮತ್ತು ನಿರಾಧಾರವಾಗಿರುತ್ತದೆ ಎಂದು ಹೇಳಿರುತ್ತಾರೆ.

6. 10ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಅವರು ಹಾಸನ ಜಿಲ್ಲೆಯಲ್ಲಿ ಬಿ.ಇ.ಓ. ಆಗಿ ಕರ್ತವ್ಯ ನಿರ್ವಹಿಸಿರುವುದಿಲ್ಲ. ದೂರಿನಲ್ಲಿ ತಿಳಿಸಿರುವ ಶಾಲೆಗಳು ಅವರು ಹಿಂದೆ ಕರ್ತವ್ಯ ನಿರ್ವಹಿಸಿದ ಜಿಲ್ಲೆಯಲ್ಲಿ ಇರುವುದಿಲ್ಲ. ಆದ್ದರಿಂದ, ಅವರಿಗೆ ಈ ಪ್ರಕರಣ ಸಂಬಂಧಿಸಿಲ್ಲವೆಂದು ಹೇಳಿರುತ್ತಾರೆ.

7. ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ದೂರಿನ ಬಗ್ಗೆ ಅಬ್ದುಲ್ ಅಲೀಂ, ನಿವೃತ್ತ ಶಿಕ್ಷಣ ಇಲಾಖೆ ಇವರು ಮಾಡಿರುವ ವರದಿಯ ಪ್ರಕಾರ ದೂರು ಸಾಬೀತಾಗಿದ್ದರೂ ಸಹ 2ನೇ ಹಂತದ ತನಿಖೆಯಲ್ಲಿ ಸುಳ್ಳಿನ ಕಂತೆಯನ್ನು ಸೃಷ್ಟಿಸಿ ಭ್ರಷ್ಟರನ್ನು ರಕ್ಷಿಸುವ ನಾಟಕವಾಗಿ ಇಡೀ ತನಿಖೆಯನ್ನೇ ಮುಚ್ಚಿ ಹಾಕಲಾಗಿದೆ. ಅವರಿಗೆ ಯಾವುದೇ ನೋಟೀಸು ನೀಡದೆ ಮತ್ತು ಅವರಿಂದ ಯಾವುದೇ ಉತ್ತರವನ್ನು ಸಹ ಪಡೆಯದೆ ಏಕಪಕ್ಷೀಯವಾಗಿ ತನಿಖೆ ನಡೆಸಲಾಗಿದೆ. ಈ ಬಗ್ಗೆ ಇಡಿ 17 ಡಿಜಿಬಿ ಕಡತ ಪರಿಶೀಲಿಸಿದರೆ, ಸತ್ಯ ಯಾವುದು ಸುಳ್ಳು ಯಾವುದೆಂದು ತಿಳಿಯುತ್ತದೆ. ದೂರು ಸಾಬೀತಾಗಿರುವ ಶಾಲೆಗಳನ್ನು ಈಗಲೂ ಸಹ ಮುಚ್ಚಲಾಗಿರುತ್ತದೆ. ಆದರೆ, ಭ್ರಷ್ಟಾಚಾರ ಎಸಗಿದ ಅಧಿಕಾರಿಗಳಿಗೆ ಶಿಕ್ಷೆಯಾಗಿಲ್ಲ. ಆದ್ದರಿಂದ, ಸದರಿ ಕಡತ ಮತ್ತು ಶಾಲೆಗಳ ಮರು ತನಿಖೆ ನಡೆಸಿ ಅಕ್ರಮವೆಸಗಿರುವ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

8. ದೂರುದಾರರ ದೂರನ್ನು ಪರಿಶೀಲಿಸಿದಾಗ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಶಾಲೆಗಳನ್ನು ಸ್ಥಳಾಂತರ ಮಾಡಲು ಪ್ರಸ್ತಾವನೆಯನ್ನು ಇಟ್ಟು ಖಾಸಗಿ ಶಿಕ್ಷಣ ಸಂಸ್ಥೆಗಳ ಜೊತೆ ಶಾಮೀಲಾಗಿ ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ ಮತ್ತು ಸರ್ಕಾರಕ್ಕೆ ವಂಚಿಸಿರುತ್ತಾರೆಂದು ದೂರುದಾರರು ಆಪಾದಿಸಿರುವುದು ಕಂಡುಬರುತ್ತದೆ. ದೂರುದಾರರು ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಶಾಲೆಗಳನ್ನು ಸ್ಥಳಾಂತರ ಮಾಡಿರುವ ಆಪಾದನೆಗಳ ಬಗ್ಗೆ ಸರ್ಕಾರದ ಉಪ ಕಾರ್ಯದರ್ಶಿ (ಸೇವೆಗಳು), ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ), ಇವರ ಮುಂದೆ ನಡೆದಿರುವ ನಡವಳಿಯ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಸದರಿ ನಡವಳಿಯಲ್ಲಿ ಆಯುಕ್ತರು. ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಸಹ ನಿರ್ದೇಶಕರು (ಶಾಲಾ ಶಿಕ್ಷಣ) ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ವರದಿ ಸಲ್ಲಿಸುವಂತೆ ನಿರ್ದೇಶಿಸಿದ ಮೇರೆಗೆ ದೂರುದಾರರು ದೂರಿನಲ್ಲಿ ನೀಡಿರುವ ಅಂಶಗಳು ಸಾಬೀತಾಗಿದೆಯೆಂದು ಚಿಕ್ಕಮಗಳೂರು ಜಿಲ್ಲಾ ಉಪ ನಿರ್ದೇಶಕರು ಆಡಳಿತ ಮಂಡಳಿಯೊಂದಿಗೆ ಶಾಮೀಲಾಗಿರುವುದು ಸಾಬೀತಾಗಿದೆಯೆಂದು ವರದಿ ಮಾಡಿರುತ್ತಾರೆಂದು ನಮೂದಿಸಿರುವುದು ಕಂಡುಬರುತ್ತದೆ. ಸರ್ಕಾರದ ಉಪ ಕಾರ್ಯದರ್ಶಿಗಳು ಕಂಡಿಕೆ 18 ರಲ್ಲಿ ವಿಚಾರಣಾಧಿಕಾರಿಗಳು ಸದರಿ ಪ್ರಕರಣವನ್ನು ಕೂಲಂಕುಷವಾಗಿ ವಿಚಾರಣೆ ನಡೆಸಿ ಸಂಬಂಧಿಸಿದ ಉಪ ನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರ ಕಚೇರಿ ಸಿಬ್ಬಂದಿ ವರ್ಗದವರು, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಸಿಬ್ಬಂದಿಗಳು. ಆಯುಕ್ತರು. ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇಲ್ಲಿಯ ಕೆಲ ಅಧಿಕಾರಿಗಳು ಮತ್ತು ನೌಕರರು ಸದರಿ ಪ್ರಕರಣದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದಾಗಿ ವರದಿಯಲ್ಲಿ ತಿಳಿಸಿರುತ್ತಾರೆಂದು ನಮೂದಿಸಿರುವುದು ಕಂಡುಬರುತ್ತದೆ.

9. ದಿ.26/2/11 ರಂದು ರಾಜ್ಯಾದ್ಯಂತ 1987–88 ರಿಂದ 1994–95 ರವರೆಗೆ ಆರಂಭಗೊಂಡು ಸ್ಥಳಾಂತರ/ಹಸ್ತಾಂತರಗೊಂಡ ಖಾಸಗಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ಮಾಹಿತಿ ಸಂಗ್ರಹಿಸಿ ಆ ರೀತಿಯ ಪ್ರಕರಣಗಳು ಎಷ್ಟು ನಡೆದಿವೆ ಎನ್ನುವ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಲು ನಿವೃತ್ತ ನಿರ್ದೇಶಕರನ್ನು ವಿಶೇಷಾಧಿಕಾರಿಯನ್ನಾಗಿ ನೇಮಿಸಿ 6 ತಿಂಗಳೊಳಗೆ ಸಮಗ್ರ ವರದಿಯನ್ನು ಪಡೆಯುವ ಬಗ್ಗೆ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಲು ತಿಳಿಸಿರುವುದು ಕಂಡುಬರುತ್ತದೆ. ನಂತರದಲ್ಲಿ ತಪ್ಪಿತಸ್ಥ ಅಧಿಕಾರಿ ಮತ್ತು ನೌಕರರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶ ಹೊರಡಿಸಿರುವುದು ಕಂಡುಬರುತ್ತದೆ.

10. ಅಪಾದಿತ ಅಧಿಕಾರಿ ಹಾಗೂ ನೌಕರರ ವಿರುದ್ಧ ಇಲಾಖಾ ವಿಚಾರಣಾ ವರದಿಯನ್ನು ಪರಿಶೀಲಿಸಿದಾಗ, ವಿಚಾರಣಾಧಿಕಾರಿಗಳು ದಿ.7/6/14 ರಂದು ವರದಿಯನ್ನು ಸಲ್ಲಿಸಿ ಎಲ್ಲಾ ಆರೋಪಿತ ಅಧಿಕಾರಿಯವರ ಮೇಲೆ ಮಾಡಲಾದ ಯಾವುದೇ ದೋಷಾರೋಪಣೆಗಳು ರುಜುವಾತಾಗಿಲ್ಲವೆಂದು ತೀರ್ಮಾನಿಸಿ ವಿಚಾರಣಾ ವರದಿಯನ್ನು ನೀಡಿರುವುದು ಕಂಡುಬರುತ್ತದೆ. ಸದರಿ ವಿಚಾರಣಾ ವರದಿಯ ಆಧಾರದಲ್ಲಿ ಸರ್ಕಾರವು ಆದೇಶ ಸಂ:ಇಡಿ 17 ಡಿಜಿಪಿ 2011 ಬೆಂಗಳೂರು ದಿ.23/3/2015 ರಂತೆ ವಿಚಾರಣಾ ವರದಿಯನ್ನು ಒಪ್ಪಿ ಆಪಾದಿತರನ್ನು ದೋಷಮುಕ್ತಗೊಳಿಸಿ ಆದೇಶಿಸಿರುವುದು ಕಂಡುಬರುತ್ತದೆ.

11. ದೂರುದಾರರು ದಿ.6/3/15 ರಂದು ಪ್ರಕರಣದ ಮರು ತನಿಖೆಗೆ ಆದೇಶಿಸಬೇಕೆಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಇವರಿಗೆ ಬರೆದಿರುವ ಪತ್ರದ ಪ್ರತಿಯನ್ನು ಹಾಜರು ಪಡಿಸಿದ್ದು, ಆ ಆಧಾರದಲ್ಲಿ ದಿ.18/3/15 ರಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಪುನರ್ ತನಿಖೆ ಮಾಡುವ ಕುರಿತಂತೆ ನಿಯಮಾನುಸಾರ ಅಗತ್ಯ ಕ್ರಮ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸೂಚಿಸಿರುವುದು ಕಂಡುಬರುತ್ತದೆ. ಆದರೆ, ಸದರಿ ನಿರ್ದೇಶನದ ಮೇರೆಗೆ ಏನು ಕ್ರಮ ಕೈಗೊಳ್ಳಲಾಗಿದೆಯೆನ್ನುವ ಬಗ್ಗೆ ಯಾವುದೇ ದಾಖಲಾತಿಗಳನ್ನು ದೂರುದಾರರು ಹಾಜರು ಪಡಿಸಿರುವುದಿಲ್ಲ.

12. ಆದ್ದರಿಂದ, ದೂರುದಾರರು ದಿ.6/3/2015 ರಂದು ಶಿಕ್ಷಣ ಸಚಿವರಿಗೆ ಕಳುಹಿಸಿರುವ ಮನವಿಯ ಪ್ರತಿ ಹಾಗೂ ಶಿಕ್ಷಣ ಸಚಿವರು ದಿ.18/3/15 ರಂದು ನೀಡಿರುವ ಸೂಚನೆಯ ಮೇರೆಗೆ ಏನು ಕ್ರಮ ಕೈಗೊಳ್ಳಲಾಗಿದೆ ಎನ್ನುವ ಬಗ್ಗೆ ವರದಿ ನೀಡುವಂತೆ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಆದೇಶಿಸಲಾಗಿತ್ತು.

13. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಪ್ರೌಢ ಶಾಲೆಗಳ ಸ್ಥಳಾಂತರ/ಹಸ್ತಾಂತರದ ಹೆಸರಿನಲ್ಲಿ ಆಗಿರುವ ಕ್ರಮಗಳಿಗೆ ಸಂಬಂಧಿಸಿದಂತೆ ಒಟ್ಟು 12 ಅಧಿಕಾರಿ/ನೌಕರರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ನಡೆಸಲು ಶ್ರೀ.ಕುಕ್ಕಾಜೆ ರಾಮಕೃಷ್ಣ ಭಟ್, ನಿವೃತ್ತ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದ್ದು, ಅದರಂತೆ ವಿಚಾರಣಾಧಿಕಾರಿಗಳು ತನಿಖೆ ನಡೆಸಿ ದಿ.7/6/2014 ರಂದು ನೀಡಿರುವ ವಿಚಾರಣಾ ವರದಿಯಲ್ಲಿ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯನ್ನಾಧರಿಸಿ ಪ್ರಕರಣದಲ್ಲಿ ಭಾಗಿಯಾದ ಒಟ್ಟು 12 ಅಧಿಕಾರಿ/ನೌಕರರ ಮೇಲಿನ ಆರೋಪಗಳಿಂದ ದೋಷಮುಕ್ತಗೊಳಿಸಿ ದಿ.23/3/15 ರಲ್ಲಿ ಆದೇಶ ಹೊರಡಿಸಲಾಗಿದೆ. ತದನಂತರ ಅಂದಿನ ಮಾನ್ಯ ಸಚಿವರು ತಮ್ಮ ದಿ.18/3/2015 ರ ಟಿಪ್ಪಣಿಯಲ್ಲಿ ಕಡತ ಸಂ:ಇಡಿ 17 ಡಿಜಿಪಿ 2011 ರಲ್ಲಿನ ಪ್ರಕರಣದ ಕುರಿತು ಪುನರ್ ತನಿಖೆ ಮಾಡುವ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಸೂಚಿಸಿರುವುದರ ಮೇರೆಗೆ ಪರಿಶೀಲಿಸಿ ಕಡತವನ್ನು ಮಾನ್ಯ ಸಚಿವರಿಗೆ ಸಲ್ಲಿಸಿದ್ದರನ್ವಯ ಮಾನ್ಯ ಹೆಚ್ಚುವರಿ ಕಡತದಲ್ಲಿನ ಹಿಂದಿನ ಆದೇಶ ಹಾಗೂ ಟಿಪ್ಪಣಿ ದಿ.18/3/15 ರಂತೆ ಸಲ್ಲಿಸಿದ ಷರಾವನ್ನು ಗಮನಿಸಿ ಕಡತವನ್ನು ಹಿಂದಿರುಗಿಸಿರುತ್ತಾರೆ. ಮಾನ್ಯ ಸಚಿವರ ಟಿಪ್ಪಣಿಯಂತೆ ಈಗಾಗಲೇ ಅಗತ್ಯ ಕ್ರಮ ವಹಿಸಲಾಗಿದೆಯೆಂದು ಹೇಳಿರುತ್ತಾರೆ.

14. ಸರ್ಕಾರದ ಅಪರ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಇವರು ವರದಿಯ ಜೊತೆ ಹಾಜರು ಪಡಿಸಿರುವ ನಡವಳಿಯನ್ನು ಪರಿಶೀಲಿಸಿದಾಗ, ದಿ.23/8/14 ರಂದು ಕಂಡಿಕೆ 252 ರಲ್ಲಿ ಸಚಿವರು ಮರು ವಿಚಾರಣೆಗೆ ಆದೇಶಿಸಿರುವುದು ಕಂಡುಬರುತ್ತದೆ.

15. ನಂತರದಲ್ಲಿ ದಿ.29/10/14 ರಂದು ಪುನಃ ಮರು ವಿಚಾರಣೆ ಕೈಗೊಂಡಲ್ಲಿ ಅಂತಿಮ ವರದಿ ಸಲ್ಲಿಸಲು ದೀರ್ಘಕಾಲ ಬೇಕಾಗುತ್ತದೆ. ಆದ್ದರಿಂದ, ಕಂಡಿಕೆ 252 ರ ಆದೇಶವನ್ನು ಹಿಂದಕ್ಕೆ ಪಡೆದಿದೆ. ನಕಲಿ ದಾಖಲೆ ಸೃಷ್ಟಿಸಿ ಸ್ಥಳಾಂತರಕ್ಕೆ ಅನುಮತಿ ಪಡೆದ ಶಾಲೆಗಳನ್ನು ಸ್ಥಳಾಂತರ ಪಡೆದ ದಿನಾಂಕದಿಂದ ಹೊಸದಾಗಿ ಪ್ರಾರಂಭವಾದ ಶಾಲೆಗಳೆಂದು ಪರಿಗಣಿಸಿ ವಿಚಾರಣಾಧಿಕಾರಿಯವರ ವರದಿಯನ್ನಾಧರಿಸಿ ಒಟ್ಟು 12 ಅಧಿಕಾರಿ/ನೌಕರರ ಮೇಲಿನ ಆರೋಪಗಳು ರುಜುವಾತಾಗಿಲ್ಲವೆಂಬ ತೀರ್ಮಾನವನ್ನು ನೀಡಿರುವ ಹಿನ್ನೆಲೆಯಲ್ಲಿ ಸದರಿ ಅಧಿಕಾರಿ/ನೌಕರರನ್ನು ಆರೋಪ ಮುಕ್ತಗೊಳಿಸುವಂತೆ ಆದೇಶಿಸಿರುವುದು ಕಂಡಿಕೆ 261 ರಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಆದೇಶಿಸಿರುವುದು ಕಂಡುಬರುತ್ತದೆ.

16. ಈ ಪ್ರಕರಣದಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನು ನೇಮಿಸಿ ಸರ್ಕಾರವು ವಿಚಾರಣಾ ವರದಿಯನ್ನು ಪಡೆದಿದ್ದು, ಸದರಿ ವಿಚಾರಣಾ ವರದಿಯನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಒಪ್ಪದೆ ಮರು ವಿಚಾರಣೆ ಮಾಡಲು ದಿ.23/8/14 ರಂದು ಆದೇಶಿಸಿರುವುದು ಶಿಕ್ಷಣ ಇಲಾಖೆಯ ನಡವಳಿಯ ಕಂಡಿಕೆ 252 ರಲ್ಲಿ ಕಂಡುಬರುತ್ತದೆ. ನಂತರದಲ್ಲಿ ದಿ.29/10/14 ರಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಕಂಡಿಕೆ 261 ರಲ್ಲಿ ಇನ್ನೊಂದು ಆದೇಶವನ್ನು ಮಾಡಿ ಈ ಕೆಳಗಿನಂತೆ ಆದೇಶಿಸಿರುವುದು ಕಂಡುಬರುತ್ತದೆ.

> *"ಪ್ರಕರಣ 2010-11ನೇ ಸಾಲಿನಿಂದಲೂ ನಡೆಯುತ್ತಿದ್ದು, ವಿಚಾರಣೆ ವಹಿಸಿದ ನಿವೃತ್ತ ನ್ಯಾಯಾಧೀಶರು ದಿ.7/6/14 ರಂದು ವಿಚಾರಣಾ ವರದಿಯನ್ನು ಸಲ್ಲಿಸಿರುವುದಾಗಿ ಕಂಡಿಕೆ 237 ರಲ್ಲಿ ಪ್ರಸ್ತಾಪಿಸಿರುವುದನ್ನು ಗಮನಿಸಿದೆ. ವಿಚಾರಣೆಗೆ ಒಳಗೊಂಡ ಕಲವು ಅಧಿಕಾರಿಗಳು ನಿವೃತ್ತಿ ಹೊಂದಿರುವುದು ಸಹ ಕಂಡಿಕೆ 323 ರಲ್ಲಿ ಕಂಡುಬರುತ್ತದೆ.*
>
> *ವಿಚಾರಣಾಧಿಕಾರಿಗಳು ಸಲ್ಲಿಸಿದ ಅಂತಿಮ ವರದಿಯಲ್ಲಿ ಆರೋಪ ಸಾಬೀತಾಗಿಲ್ಲವೆಂದು ಅಭಿಪ್ರಾಯ ನೀಡಿರುವುದನ್ನು ಕಂಡಿಕೆ 238 ರಲ್ಲಿ ಪ್ರಸ್ತಾಪಿಸಿದ್ದು. ಈ ರೀತಿ ವರದಿ ನೀಡಿದ ನಂತರದಲ್ಲಿ ಪುನಃ ಮರು ವಿಚಾರಣೆಗೆ ಕ್ರಮ ಕೈಗೊಂಡಲ್ಲಿ ಅಂತಿಮ ವರದಿ ಸಲ್ಲಿಸಲು ದೀರ್ಘಕಾಲ ಬೇಕಾಗುತ್ತದೆ. ಆದುದರಿಂದ, ಕಂಡಿಕೆ 252 ರ ಆದೇಶವನ್ನು ಹಿಂದಕ್ಕೆ ಪಡೆದಿದೆ. ನಕಲಿ ದಾಖಲೆ ಸೃಷ್ಟಿಸಿ ಸ್ಥಳಾಂತರಕ್ಕೆ ಅನುಮತಿ ಪಡೆದ ಶಾಲೆಗಳನ್ನು ಸ್ಥಳಾಂತರ ಪಡೆದ ದಿನಾಂಕದಿಂದ ಹೊಸದಾಗಿ ಪ್ರಾರಂಭವಾದ ಶಾಲೆಗಳೆಂದು ಪರಿಗಣಿಸಿ, ಪುಟ 798 ರಿಂದ 824 ರವರೆಗೆ ವಿಚಾರಣಾಧಿಕಾರಿಯವರ (ನಿವೃತ್ತ ನ್ಯಾಯಾಧೀಶರ) ವರದಿಯನ್ನಾಧರಿಸಿ ಕಂಡಿಕೆ 232 ರಲ್ಲಿ ಕಾಣಿಸಿದ ಒಟ್ಟು 12 ಅಧಿಕಾರಿಗಳು/ನೌಕರರ ಮೇಲಿನ ಆರೋಪಗಳು ರುಜುವಾತಾಗಿಲ್ಲವೆಂಬ ತೀರ್ಮಾನವನ್ನು ನೀಡಿರುವ ಹಿನ್ನೆಲೆಯಲ್ಲಿ ಸದರಿ ಅಧಿಕಾರಿ/ನೌಕರರನ್ನು ಆರೋಪಮುಕ್ತಗೊಳಿಸುವಂತೆ ಆದೇಶಿಸಿದೆ."* ಎಂದು ಹೇಳಿರುವುದು ಕಂಡುಬರುತ್ತದೆ.

17. ಶಿಕ್ಷಣ ಇಲಾಖೆಯ ನಡವಳಿಯ ಕಂಡಿಕೆ 248 ರಲ್ಲಿ ಈ ಕೆಳಗಿನಂತೆ ಟಿಪ್ಪಣಿಯನ್ನು ಮಂಡಿಸಿರುವುದು ಕಂಡುಬರುತ್ತದೆ.

*"ವಿಚಾರಣೆಯ ಒಂದು ಸಂದರ್ಭದಲ್ಲಿ ವಿಚಾರಣಾಧಿಕಾರಿಯವರು ಮೂರನೇ ವ್ಯಕ್ತಿಗಳು ಒಂದನೇ ಆರೋಪಿತ ಅಧಿಕಾರಿಯ ಸಹಿಯನ್ನು ಫೋರ್ಜರಿ ಮಾಡಿರಬೇಕು ಎಂಬುದಾಗಿ ಸ್ಪಷ್ಟವಾಗಿ ಗೋಚರಿಸುತ್ತದೆ. ಎಂಬ ಅಭಿಪ್ರಾಯಕ್ಕೆ ಬಂದಿರುತ್ತಾರೆ. ಆಪಾದಿತ ಅಧಿಕಾರಿ ಸಹಿ ಮಾಡಿರುವ ಸಹಿಗಳು ಫೋರ್ಜರಿ ಎನ್ನುವ ಅಭಿಪ್ರಾಯಕ್ಕೆ ಬರುವ ಮುನ್ನ ವಿಚಾರಣಾಧಿಕಾರಿಯವರು ಫೋರ್ಜರಿ ಮಾಡಲಾಗಿದೆ ಎಂಬ ಸಹಿಗಳ ಬಗ್ಗೆ ಬೆರಳಚ್ಚು ತಜ್ಞರ ಅಭಿಪ್ರಾಯವನ್ನು ಪಡೆಯಬಹುದಾಗಿತ್ತು ಅಥವಾ ಬೆರಳಚ್ಚು ತಜ್ಞರ ಅಭಿಪ್ರಾಯವನ್ನು ಪಡೆದು ಸಲ್ಲಿಸುವಂತೆ ಮಂಡನಾಧಿಕಾರಿಯವರಿಗಾದರೂ ತಿಳಿಸಬಹುದಾಗಿತ್ತು. ಈ ಅಂಶವನ್ನು ಸಹ ಗಮನದಲ್ಲಿಟ್ಟುಕೊಂಡು ಕಂಡಿಕೆ 242 ರಲ್ಲಿ ತಿಳಿಸಿದಂತೆ ದಾಖಲಾತಿಗಳು/ ಸಾಕ್ಷ್ಯಾಧಾರಗಳು ಇಲ್ಲವೆಂಬ ಒಂದೇ ಕಾರಣಕ್ಕಾಗಿ ಆರೋಪಗಳು ರುಜುವಾತಾಗಿಲ್ಲ ಎಂದು ವಿಚಾರಣಾಧಿಕಾರಿಯವರು ನೀಡಿರುವ ಅಭಿಪ್ರಾಯವನ್ನು ಒಪ್ಪದೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ 1957 ರ ನಿಯಮ 11(ಎ) ರನ್ವಯ ಮರು ವಿಚಾರಣೆ ಮಾಡಲು ವಿಚಾರಣಾಧಿಕಾರಿಯನ್ನು ಕೋರಬಹುದು ಹಾಗೂ ಈ ಪ್ರಕರಣದಲ್ಲಿ ಹಿಂದೆ ಮಂಡನಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಅಧಿಕಾರಿಯ ಬದಲಾಗಿ ಉಪ ನಿರ್ದೇಶಕರು ಹಾಗೂ ತತ್ಸಮಾನ ವೃಂದದ ಒಬ್ಬ ಉಪ ನಿರ್ದೇಶಕರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಬಹುದು. ಈ ಪ್ರಸ್ತಾವನೆಗೆ ಶಿಸ್ತು ಪ್ರಾಧಿಕಾರವಾದ ಮಾನ್ಯ ಶಿಕ್ಷಣ ಸಚಿವರ ಅನುಮೋದನೆ ಅವಶ್ಯಕತೆ ಇರುತ್ತದೆ. ಅದರಂತೆ ಮಾನ್ಯ ಶಿಕ್ಷಣ ಸಚಿವರ ಅನುಮೋದನೆಗೆ ಕಡತ ಸಲ್ಲಿಸಬಹುದು"* ಎಂದು ಟಿಪ್ಪಣಿಯನ್ನು ಮಂಡಿಸಿರುವುದು ಕಂಡುಬರುತ್ತದೆ.

18. ಸದರಿ ಟಿಪ್ಪಣಿಯನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾಗಿದ್ದ ಕಿಮ್ಮನೆ ರತ್ನಾಕರ ಇವರು ಒಪ್ಪಿ ಕಂಡಿಕೆ 252 ರಲ್ಲಿ ಈ ಕೆಳಗಿನಂತೆ ಆದೇಶ ಮಾಡಿರುವುದು ಕಂಡುಬರುತ್ತದೆ.

*"ಕಂಡಿಕೆ (248) ರಲ್ಲಿ ಕಾಣಿಸಿದಂತೆ ಮರು ವಿಚಾರಣೆಗೆ ಆದೇಶಿಸಿದೆ"*

19. ಈ ಹಂತದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 11ಎ ನ್ನು ಪರಿಶೀಲಿಸುವುದು ಸೂಕ್ತವೆಂದು ಕಂಡುಬರುತ್ತದೆ.

20. ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 11ಎ ರನ್ವಯ ಈ ಕೆಳಕಂಡಂತೆ ಆಸ್ಪದ ಕಲ್ಪಿಸಲಾಗಿದೆ.

*"ಶಿಸ್ತು ಪ್ರಾಧಿಕಾರಿಯು ತಾನೇ ವಿಚಾರಣಾ ಪ್ರಾಧಿಕಾರಿಯಾಗಿಲ್ಲದಿರುವಲ್ಲಿ ತಾನು ಲಿಖಿತದಲ್ಲಿ ಅಭಿಲೇಖಿಸತಕ್ಕ ಪ್ರಕರಣಗಳಿಗಾಗಿ ವಿಚಾರಣಾ ಪ್ರಾಧಿಕಾರಿಗೆ ಮುಂದಿನ ವಿಚಾರಣೆ ಮತ್ತು ವರದಿಗಾಗಿ ಪ್ರಕರಣವನ್ನು ಕಳುಹಿಸಬಹುದು ಮತ್ತು ವಿಚಾರಣಾ ಪ್ರಾಧಿಕಾರಿಯ ಆ ತರುವಾಯ ಸಾಧ್ಯವಾದ ಮಟ್ಟಿಗೆ 11ನೇ ನಿಯಮದ ಉಪಬಂಧಗಳಿಗನುಸಾರವಾಗಿ ಮುಂದಿನ ವಿಚಾರಣೆ ನಡೆಸಲು ಕ್ರಮ ಕೈಗೊಳ್ಳತಕ್ಕದ್ದು".*

21. ಶಿಕ್ಷಣ ಸಚಿವರು ಮರು ವಿಚಾರಣೆಗೆ ಆದೇಶ ಮಾಡಿದ ನಂತರ ನಾಗರೀಕ ಸೇವಾ (ವರ್ಗೀಕರಣ. ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 11 ರ ಪ್ರಕಾರ ಕ್ರಮವನ್ನು ಕೈಗೊಳ್ಳಬೇಕಾಗಿತ್ತು. ಆದರೆ ಸದರಿಯವರು ಆರೀತಿಯಲ್ಲಿ ಕ್ರಮ ಕೈಗೊಳ್ಳದೆ ಆರೋಪಿತ ಅಧಿಕಾರಿಗಳನ್ನು ದೋಷಮುಕ್ತಗೊಳಿಸಿರುವುದು ಸರಿಯಾದ ಕ್ರಮವಾಗಿರುವುದಿಲ್ಲವೆಂದು ಅಭಿಪ್ರಾಯ ಪಡಲಾಗಿದೆ.

22. ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಕಂಡಿಕೆ 252 ಮತ್ತು 261 ರಂತೆ ಮಾಡಿರುವ ಆದೇಶವನ್ನು ಪುನರ್ ಪರಿಶೀಲಿಸಿ ಸೂಕ್ತ ಆದೇಶವನ್ನು ಮಾಡಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

27/2/18.

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.